http://www.howtoexam.com

A 311/III

# ಮೂರನೆಯ ಬಿ.ಎ. ಪರೀಕ್ಷೆ, ಮೇ/ಜೂನ್ 2010
## ಐಚ್ಛಿಕ ಕನ್ನಡ (ಪತ್ರಿಕೆ - 3)
## ಹಳಗನ್ನಡ ಪದ್ಯಗಳು ಮತ್ತು ಛಂದಸ್ಸು
## (Revised SIM Scheme)

ಕಾಲ: 3 ಗಂಟೆಗಳು ಗರಿಷ್ಠಾಂಕ: 90

### ಹಳಗನ್ನಡ ಪದ್ಯಗಳು 50 ಅಂಕಗಳು
### (ವಡ್ಡಾರಾಧನೆ ಮತ್ತು ವಿಕ್ರಮಾರ್ಜುನ ವಿಜಯಂ)

### ವಿಭಾಗ – ಎ

1. ಯಾವ ಪದ್ಯವನ್ನೂ ಬಿಡದೆ **ಎರಡು** ಭಾಗಗಳ ಸಂದರ್ಭ ಸೂಚಿಸಿ ಭಾವಸ್ವಾರಸ್ಯವನ್ನು ವಿವರಿಸಿ : (4×2=8)

1.1) ಮುನ್ನಿನಂತೆ ತಂದೆಯಲ್ಲಿಯುೞ್ಕಿ ಕೆಟ್ಟಂತಿರಿಲ್ಲಿಯುಮೆಂತಾನುಮುೞ್ಕಿ ಕಿಡುವಿರೆಂದಾಂ ನಿಮ್ಮಂ ಯೋಗ್ಯರಂ ಮಾಡುವ ಕಾರಣಮಾಗಿ ನಿಮಗೆ ಪಸರಂಗೊಟ್ಟೆನಿಲ್ಲಿದೆರ್ಕೆ ಮುಳಿಯದಿರಿಂ ಕ್ಷಮಿಯಿಸಿಮೆಂದುಡಲುಂ ತುಡಲುಂ ಸಂಬಳಮುಮಂ ಕೊಟ್ಟುಕಟೆಪಿದಾಗಳ್

1.2) ಎಮ್ಮ ಸೆಜ್ಜೆಯೋವರಿಯಂ ಕಳ್ಳಂ ಪೊಕ್ಕು ಪುಡಿಕೆಯಂ ತೆಱೆದಚ್ಯುತೇಂದ್ರನಿತ್ತ ಕುಲಧನಮಪ್ಪ ಹಾರಮಂ ಕೊಂಡುಪೋದಂ ಬೇಗಂ ಕಳ್ಳನನಾರಯ್ದು ಹಾರಮಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನ್.

1.3) ಎನಗೆ ಕೂರ್ಪುದನಾ ಘಟಸಂಭವಂ
ನಿನಗೆ ಕೂರನಟಲ್ ನಿನತಲ್ತು ಕೇ ||
ಳೆನುಕುಮಾರದ ಶೋಕಮನಿರ್ವರುಂ
ಮುನಿವರಂ ತವೆ ಕೊಂದೊಡನೇಗುವಂ ||

1.4) ಅದಟಿನ ವಿಕ್ರಮಾರ್ಜುನನ ಸಾಹಸ ಭೀಮನ ಕೋಪ ಪಾವಕಂ
ಪುದಿದಳುರ್ದಟ್ಟೆ ಕೊಳ್ಳದಿರದಿಲ್ಲಿಯುಮೆಮ್ಮುಮನಿಲ್ಲಿ ಬಾಟ್ವರಂ
ಕದಡದಿರಿತ್ತ ಬಾರದಿರು ಸಾರದಿರೆಂಬವೊಲಾದುದೆತ್ತಮು
ನ್ಮದ ಕಳಹಂಸ ಕೋಕ ನಿಕರ ಧ್ವನಿ ರುಂದ್ರ ಫಣೀಂದ್ರ ಕೇತುವಂ.

ಪು.ತಿ.ನೋ.

Click here to download latest Company placement paper and interview questions

http://www.howtoexam.com



2. 2.1) **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ : **(½×4=2)**

ಕತಿಪಯ, ಪಸರಂ, ಆದಮಾನುಂ, ದೂಸಿಗ, ಕುದುಗುಳಿ, ಏಗಳ್, ಉರಿಗೇಸಂ, ಪಂದಲೆ

2.2) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(1×2=2)**

ಸೋಮಶರ್ಮ, ಯಶೋಭದ್ರೆ, ಪಂಪ, ಸಂಸಪ್ತಕರು.

3. **ನಾಲ್ಕನ್ನು** ಸಂದರ್ಭ ಸಹಿತ ವಿವರಿಸಿ : **(2×4=8)**

3.1) ಕಪ್ಪಡಮುಟ್ಟು ಬೈಕಂದಿರಿದಪ್ಪೊಡಮೋದುವ.

3.2) ಪಂಚಮಹಾಪಾತಕನೆಮ್ಮನೇೞೆಂಟು ವರುಷಂಬರಂ ಪಗೆವರಂ ಬಗೆವಂತೆ ದಂಡಿಸಿದನ್.

3.3) ನೀಂ ಶ್ರಾವತ ವ್ರತಂಗಳಂ ಕೈಕೊಂಡೆಯಪ್ಪೊಡೇಕೆ ಕಳ್ವೆ.

3.4) ಕಮ್ಮರಿಯೊವಜಂ ಬಿಲ್ಲೊವಜನೆಂಬುದಂ ಮಾಡುವೆನೇ.

3.5) ಆಂ ಸ್ಯಂದನದಿಂದಿೞಿದು ಪೋಪೆನೆಸಗಂ ತೀರಂ.

3.6) ಎನ್ನಂ ಮುಳಿಯಿಸಿ ನಿನಗಿಂ ದ್ರೋಹ ಬಾೞ್ವೆಸೆಯುಂಟೇ.

## ವಿಭಾಗ – ಬಿ

4. ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಉಪಕಥೆಗಳ ಸ್ವಾರಸ್ಯವೇನು ? **10**

**ಅಥವಾ**

ವಿದ್ಯುಚ್ಚೋರ ಮುಕ್ತಿಶ್ರೀಗೆ ಒಲಿದ ಬಗೆ ಹೇಗೆ ? ವಿವರಿಸಿ.

5. ಕರ್ಣ ಹಾಗೂ ಅಶ್ವತ್ಥಾಮರ ಸಂವಾದವನ್ನು ವಿಶ್ಲೇಷಿಸಿ. **10**

**ಅಥವಾ**

ಭೀಮ–ದುರ್ಯೋಧನರ ಗದಾಯುದ್ಧವನ್ನು ಚಿತ್ರಿಸಿ.

6. ಯಾವ ಪಠ್ಯವನ್ನು ಬಿಡದೆ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×5=10)**

6.1) ವಾಯುಭೂತಿ

6.2) ವಿದ್ಯುಚ್ಚೋರ

6.3) ಘಟೋತ್ಕಚ

6.4) ದುರ್ಯೋಧನ ಹಾಗೂ ಶಲ್ಯರ ಸಂವಾದ.

Click here to download latest Company placement paper and interview questions

http://www.howtoexam.com



## ವಿಭಾಗ – ಸಿ
## (ಛಂದಸ್ಸು)

**40 ಅಂಕಗಳು**

7. ಗಣ ಎಂದರೇನು ? ಬಗೆಗಳಾವುವು ? ಯಾವುದಾದರೂ ಎರಡನ್ನು ಉದಾಹರಣೆ ಸಹಿತ ವಿವರಿಸಿ. **10**

**ಅಥವಾ**

ಕರ್ಣಾಟಕ ವಿಷಯ ಜಾತಿಗಳೆಂದರೇನು ? ಅವು ಯಾವುವು ? ಅವುಗಳ ಲಕ್ಷಣ ಮತ್ತು ಸ್ವರೂಪಗಳನ್ನು ವಿವರಿಸಿ.

8. ಅಕ್ಕರದ ಪ್ರಭೇದಗಳಾವುವು ? ಯಾವುದಾದರೂ ಮೂರನ್ನು ಉದಾಹರಣೆ ಸಹಿತ ವಿವರಿಸಿ. **10**

**ಅಥವಾ**

ಷಟ್ಪದಿಯ ಸ್ವರೂಪ, ಲಕ್ಷಣ ಹಾಗೂ ಇತಿಹಾಸವನ್ನು ವಿವರಿಸಿ.

9. **ಮೂರನ್ನು** ಕುರಿತು ಟಿಪ್ಪಣಿ ಬರೆಯಿರಿ : **(4×3=12)**

9.1) ಅಂತ್ಯಪ್ರಾಸ

9.2) ಮಂದಾನಿಲ ರಗಳೆ

9.3) ಗಣ ಪರಿವೃತ್ತಿ

9.4) ಚಂಪಕ ಮಾಲಾ ವೃತ್ತ.

10. **ಎರಡು** ಪದ್ಯ ಭಾಗಕ್ಕೆ **ಪ್ರಸ್ತಾರ** ಹಾಕಿ, **ಗಣ** ವಿಂಗಡಿಸಿ, **ಪದ್ಯ** ಜಾತಿಯನ್ನು ಹೆಸರಿಸಿ : **(4×2=8)**

10.1) ಬಾಣಂ ವಲ್ಲಭನಕ್ಕುಮೆಂದು ಪಡೆದಾ ವಾಗ್ದೇವಿಗಬ್ಜೋದ್ಭವಂ.

10.2) ತಿರುಕನೋರ್ವನೂರ ಮುಂದೆ
ಮುರುಕು ಧರ್ಮಶಾಲೆಯಲ್ಲಿ
ಪೊರಗಿರುತ್ತಲೊಂದು ಕನಸ ಕಂಡನೆಂತೆನೆ.

10.3) ಮೊದಲ ತಾಯ ಹಾಲಕುಡಿದು
ಲಲ್ಲೆಯಿಂದ ತೊದಲು ನುಡಿದು
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು.

10.4) ಬಳೆದ ಸಂತೋಷದಂತಮನೆಯ್ದೆ ಪತ್ತಿದಳ್ ಸಹಜ ಮನೋಜನಂ ನಾಡೋಜನಂ.

---

Click here to download latest Company placement paper and interview questions